ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2117/2019

ಚಾಸಾ:7 ಪ್ರಾಸಾ:6

ದಿನಾಂಕ: 20.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮುಸ್ತಾಫಾ |
| ತಂದೆಯ ಹೆಸರು | : | ಸುಲೇಮಾನ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಮುಳ್ಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿಯ ಪರಿಚಯವಿದೆ. ಆರೋಪಿ ನಮ್ಮ ಸಂಸ್ಥೆಯಲ್ಲಿ ಚಾಲಕ. ಆತ ನಮ್ಮ ಬಾಬ್ತು ಕೆಎ-20/ಪಿ-9867 ರ ಚಾಲಕನಾಗಿರುತ್ತಾನೆ. ಪೊಲೀಸರು ಸದ್ರಿ ವಾಹನ ಅಪಘಾತಕ್ಕೆ ಒಳಗಾದ ಬಗ್ಗೆ ತಿಳುವಳಿಕೆ ಹೊರಡಿಸಿರುತ್ತಾರೆ. ಆದರೆ ನಾನು ಅದಕ್ಕೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಠಾಣೆಗೆ ಹಾಜರಾಗಿ ಸೂಕ್ತ ಬಾಂಡಿನ ಮೂಲಕ ವಾಹನವನ್ನು ಬಿಡುಗಡೆಗೊಳಿಸಿಕೊಂಡಿರುತ್ತೇನೆ. ಘಟನೆಯಾದ ದಿನ ಆರೋಪಿ ಮೇಲೆ ಹೇಳಿದ ವಾಹನದ ಚಾಲಕರಾಗಿದ್ದರು.

ಸಾಕ್ಷಿಯು ಕಲಂ.133 ರ ತಿಳುವಳಿಕೆ, ಉತ್ತರ ಹಾಗೂ ಇಂಡೆಮ್ನಿಟಿ ಬಾಂಡನಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.14 ರಿಂದ 16 ಎಂದು, ಸಾಕ್ಷಿ ಸಹಿಗಳನ್ನು ನಿಪಿ.14(ಎ) ರಿಂದ ನಿಪಿ.16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.8 ರಲ್ಲಿ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಭಾಗಶಃ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಆರೋಪಿಯು ಮೇಲೆ ಹೇಳಿದ ನಮ್ಮ ವಾಹನವನ್ನು ಅಜಾಗರೂಕವಾಗಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಅಪಘಾತಪಡಿಸಿದ್ದು, ಸುಹೇಲ್ ಹಾಗೂ ಭರತ್ ರವರು ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಈ ವಿಚಾರವಾಗಿ ನಾನು ಘಟನೆ ನಡೆದ ದಿನ ಆರೋಪಿಗೆ ನಮ್ಮ ಬಾಬ್ತು ವಾಹನವನ್ನು ಚಲಾಯಿಸುತ್ತಿದ್ದರು ಎಂದು ಪೊಲೀಸರಿಗೆ ಉತ್ತರ ನೀಡಿದ್ದರೂ ಸಹ ಆರೋಪಿ ನಮ್ಮ ಸಂಸ್ಥೆಯ ಚಾಲಕನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**